# 41. ಸಹಿಪ್ರಾ ಶಾಲೆ, ಹುಣಸೂರು ಶಾಲೆ

### "ನೀನು ಬಯಸುವ ಬದಲಾವಣೆ, ನೀನೆ ಆಗಿ ತೋರಿಸು"– ಗಾಂಧೀಜಿ

## ಶಾಲಾ ಪರಿಚಯ

ಮಲೆನಾಡಿನ ತಪ್ಪಲಲ್ಲಿರುವ ವಿಶ್ವವಿಖ್ಯಾತ ಜೋಗ ಜಲಪಾತಕ್ಕೆ 15 ಕಿ.ಮೀ ದೂರದಲ್ಲಿರುವ ಸಾಗರ ತಾಲ್ಲೂಕಿನ ಹಳ್ಳಿಗಾಡಿನ ಸಹಿಪ್ರಾ ಶಾಲೆ ಹುಣಸೂರು ಶಾಲೆ ನಮ್ಮದು, ಇದು 1948 ರಲ್ಲಿ ಸ್ಥಾಪನೆಗೊಂಡಿದ್ದು, ಈಗ ಆರು ಕೊಠಡಿಗಳನ್ನು ಹೊಂದಿರುವ ನಮ್ಮ ಶಾಲೆ ತನ್ನದೇ ಆದ ವಿಶೇಷತೆಗಳನ್ನು ಹೊಂದಿದೆ.

**ಶಾಲಾ ತಂಡದ ವಿವರ :–** ಶ್ರೀಮತಿ ಗೌರಿ ಭಟ್ಟ ಬ.ಮು.ಶಿ ಶ್ರೀ ಹಾಲಸ್ವಾಮಿ ಎಂ, ಶ್ರೀಮತಿ ರೇವತಿ ಹೆಚ್.ಎನ್ಶ್ರೀಮತಿ ಶ್ವೇತಾ ಎಂ.ಕೆ, **ಎಸ್.ಡಿ.ಎಂ.ಸಿ** ಶ್ರೀ ಕೃಷ್ಣಪ್ಪ ಜಿ.ಆರ್ ಅಧ್ಯಕ್ಷರು ಶ್ರೀಮತಿ ಪೂರ್ಣಿಮಾ ಕೆ.ಎನ್. ಉಪಾಧ್ಯಕ್ಷರು ಮತ್ತು ಇತರ ಎಲ್ಲಾ ಸದಸ್ಯರು

## ಶಾಲಾ ಮೂಲಭೂತ ಸೌಕರ್ಯಗಳು

ನಾವು ಸಹಿಪ್ರಾ ಶಾಲೆ ಹುಣಸೂರು ಶಾಲೆಗೆ ಬಂದಾಗ ಶಾಲೆ ಬಹಳಷ್ಟು ಮುಖ್ಯ ಶಿಕ್ಷಕರ ಮಾರ್ಗದರ್ಶನದಲ್ಲಿ ಅಭಿವೃದ್ಧಿಯಾಗುತ್ತ ಬಂದಿದ್ದರು, ಇನ್ನಷ್ಟು ಭೌತಿಕವಾಗಿ, ಶೈಕ್ಷಣಿಕವಾಗಿ ಸುಧಾರಣೆ ಆಗಬೇಕಾಗಿರುವುದನ್ನು ಮನಗಂಡಿದ್ದೇವೆ. ಹೆಣ್ಣು ಮಕ್ಕಳ ಶೌಚಾಲಯ, ನೀರಿನ ಟ್ಯಾಂಕ್ (ಸಿಂಟೆಕ್ಸ್) ಶಾಲಾ ಮುಂಭಾಗ, ಆಕ್ವಾ ಗಾರ್ಡ್, ಪಾತ್ರೆ ತೊಳೆಯುವ ಕಟ್ಟೆ, ಕೈ ತೊಳೆಯಲು ನಲ್ಲಿ ವ್ಯವಸ್ಥೆ, ಅಡುಗೆಮನೆ ಮೇಲೆ ಟ್ಯಾಂಕ್ (ಸಿಂಟೆಕ್ಸ್), ತೆಂಗಿನ ಗಿಡದ ಬಳಿ ನಲ್ಲಿ ಅಳವಡಿಕೆಮಾಡಲಾಗಿದೆ.

ಒಂದೊಂದು ವರ್ಷ ಒಂದೊಂದು ಗುರಿಯನ್ನಿಟ್ಟು ಇಲಾಖಾ ಸಹಕಾರ, ಸಾರ್ವಜನಿಕರ ಸಹಕಾರದಿಂದ ಶಾಲೆ ಈ ಎಲ್ಲಾ ಮೂಲಭೂತ ಸೌಕರ್ಯವನ್ನು ಹೊಂದಲು ಸಾಧ್ಯವಾಗಿದೆ.

2017–18 ರಲ್ಲಿ ಶಾಲಾ ಜಮೀನು 2.5 ಎಕರೆ ಮಂಜೂರಾಗಿರುವುದು ಒಂದು ಸಾಧನೆ. 2015–16 ರಿಂದ ಇದಕ್ಕಾಗಿ ಶ್ರಮಿಸಿದ್ದುದು ಸ್ಮರಣೀಯ. ಈ ಸಾಧನೆಯಲ್ಲಿ ಸಹಕರಿಸಿದ ಎಸ್.ಡಿ.ಎಂ.ಸಿ ಅಧ್ಯಕ್ಷರು ವೀರಭದ್ರಪ್ಪ, ನಾ.ನಿ.ಸದಸ್ಯರು ಶ್ರೀ ಶಂಕರಪ್ಪ , ಸಿ.ಆರ್.ಪಿ ಯೋಗೇಶ ಇವರನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ.

ಶಾಲೆಯಲ್ಲಿ ಹೆಣ್ಣುಮಕ್ಕಳ ಶೌಚಾಲಯವಿಲ್ಲದಿದ್ದಾಗ ಎಸ್.ಎಸ್.ಎ ಅನುದಾನ ರೂ.25000– ಹೆಣ್ಣು ಮಕ್ಕಳ ಶೌಚಾಲಯಕ್ಕೆಂದು ಮಂಜೂರು ಆಗಿದ್ದು, ಅದಕ್ಕೆ ದುಡ್ಡು ಸಾಲದೇ ಕೆಲವೊಂದು ಶಾಲೆಗಳು ಶೌಚಾಲಯ ಬೇಡವೆಂದು ಹೇಳುತ್ತಿದ್ದರೂ ಧೈರ್ಯವಾಗಿ ಸಮುದಾಯದ ಸಹಭಾಗಿತ್ವ, ಇಲಾಖಾ ಮತ್ತು ಪಂಚಾಯತ್ ನೆರವಿನಿಂದ ಸುಭದ್ರವಾದ ಹೆಣ್ಣು ಮಕ್ಕಳ ಶೌಚಾಲಯ ನಿರ್ಮಾಣ ಆಗಿದ್ದು, ನಮಗೆ ತೃಪ್ತಿ ತಂದಿದೆ.

ಹಾಳಾಗಿದ್ದ ಆಕ್ವಾಗಾರ್ಡ ದುರಸ್ಥಿ, ಕೈ ತೊಳೆಯುವ ನಾಲ್ಕು ನಲ್ಲಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುವಂತೆ ಮಾಡಿದ್ದು, ಅಡುಗೆ ಮನೆಯೊಳಗೆ ಮಳೆಗಾಲದಲ್ಲಿ ಗಾಳಿಗೆ ಮಳೆ ನೀರು ಸಿಡಿಯವುದನ್ನು ಗಮನಿಸಿ ಅಲ್ಲಿಗೂ ಮಕ್ಕಳು ಕೈತೊಳೆಯುವಾಗ ಒದ್ದೆಯಾಗುವುದನ್ನು ತಡೆಯಲು ಷೀಟ್ ಅಳವಡಿಕೆ ಮಾಡಿರುವುದು ನನಗೆ ತೃಪ್ತಿ ತಂದಿದೆ.

ಶಾಲಾ ಆವರಣದ ಸುತ್ತ ಮುತ್ತ ಸ್ಥಳಾವಕಾಶವಿದ್ದು ಐದು ತೆಂಗಿನ ಸಸಿಗಳನ್ನು ಈ ವರ್ಷ ನೆಟ್ಟಿದ್ದು ಮಕ್ಕಳು ಊಟವಾದ ನಂತರ ಕೈ ತೊಳೆಯಲು ಉಪಯೋಗಿಸಲು 2017–18 ರಲ್ಲಿ ನಲ್ಲಿ ಅಳವಡಿಕೆ ಮಾಡಲಾಗಿದೆ. ಗಿಡ ಸೊಂಪಾಗಿ ಬೆಳೆಯುತ್ತಿರುವುದು ನೀರಿನ ಸದ್ಬಳಕೆ ಆಗಿರುವುದು ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡಿದೆ.

ಶಾಲೆಗೆ ಪ್ರವೇಶಿಸಿದಾಗ ನಾವು ಗಮನಿಸಿದ್ದು ಮಕ್ಕಳ ಅಶಿಸ್ತು, ಕಸವನ್ನು ಮನಬಂದಲಿ–ತರಗತಿಯಲ್ಲಿ ಬಿಸುಟಿರುವುದು. ಪ್ರತಿ ತರಗತಿ ಕೊಠಡಿಗೂ ಡಸ್ಟ್ ಬಿನ್ ಖರೀದಿಸಿ ಅದನ್ನ ಬಳಸುವಂತೆ ಮಾಡಿರುವಂತಹ ಅತೀ ಸೂಕ್ಷ್ಮ ಸಣ್ಣ ಸಣ್ಣ ವಿಷಯಗಳನ್ನು ಇಲ್ಲಿ ಬರೆಯಲು ಸಂಕೋಚವೆನಿಸಿದರೂ ಶಾಲಾ ಸ್ವಚ್ಛತೆ ಈಗ ಮನಸ್ಸಿಗೆ ತೃಪ್ತಿ ತಂದಿದೆ.

ನಲಿಕಲಿಯ ಕನ್ನಡ, ಗಣಿತ ತರಗತಿಗಳ ಬೋಧನೆ ತಪ್ಪಿಕರವಾಗಿತ್ತು ಇಂಗ್ಲೀಷ್ ಬೋಧನೆ ಪರಿಣಾಮಕಾರಿಯಾಗಿರಲಿಲ್ಲ. ನಲಿಕಲಿ ತರಗತಿಯ ಚಪ್ಪರ, ಪ್ರಗತಿ ನೋಟ, ಕಲಿಕಾ ಸಾಮಗ್ರಿಗಳು, ವಾಚಕಗಳನ್ನು ಅಷ್ಟು ಆಕರ್ಷಣೀಯವಾಗಿ ಜೋಡಿಸಿರಲಿಲ್ಲ. ಎಸ್.ಎಲ್.ಡಿ.ಪಿ ತರಬೇತಿ ನನ್ನ ಮನೋಧೋರಣೆಗಳನ್ನು ಬದಲಾಯಿಸಿತು. ನೀನು ಬಯಸುವ ಬದಲಾವಣೆ ನೀನೆ ಆಗಿ ತೋರಿಸು. ಈ ವಾಕ್ಯ ನನಗೆ ಸ್ಪೂರ್ತಿ ನೀಡಿತು. ಎಲ್ಲಾ ಸಹ ಶಿಕ್ಷಕರ ಸಹಕಾರ ಸಲಹೆ ಹಾಗೂ ನನ್ನ ಮತ್ತು ಎಲ್ಲಾ ಶಿಕ್ಷಕರ ಕ್ರಿಯಾಶೀಲತೆ ನಲಿಕಲಿ ಚಪ್ಪರ, ಪ್ರಗತಿನೋಟ, ಕಲಿಕಾ ಸಾಮಗ್ರಿ ವಾಚಕಗಳ ಕ್ರಮಬದ್ದ ಜೋಡಣೆ, ಪ್ಲೇಕ್ಸ್ (ನಲಿಕಲಿಯ ಸಮಗ್ರ ಪದಗಳ) ಅಳವಡಿಕೆ ಇವುಗಳು ನನ್ನ ಶಾಲೆ ಬಗ್ಗೆ ಹೆಮ್ಮೆ ಮೂಡಿಸಿದೆ. ನಲಿಕಲಿ ವಿದ್ಯಾರ್ಥಿಗಳ ಇಂಗ್ಲೀಷ್ ವಿಷಯವನ್ನು ನಾನೇ ಬೋಧಿಸುತ್ತಿದ್ದು, ತೊಡಗಿಕೊಂಡಿದ್ದು ಓದುವಿಕೆ ಬರಹಗಳಲ್ಲಿ ಮಕ್ಕಳು ಪ್ರಗತಿ ಹೊಂದುತ್ತಿದ್ದಾರೆ. ಸ್ಮಾರ್ಟ ಫೋನ್‌ನಲ್ಲಿ ಆಕ್ಷನ್ ರೈಮ್‌ಗಳನ್ನು ಡೌನ್ ಲೋಡ್ ಮಾಡಿ ತರಗತಿಗೆ ಅದನ್ನು ಪ್ರದರ್ಶಿಸಿ ಇಂಗ್ಲೀಷ್ ರೈಮ್ಸ್ ಗಳನ್ನು ಹೇಳಲು ಪ್ರೇರೇಪಿಸಿ ಶಿಕ್ಷಕರು ಕಲಿತು ರಿದಮ್ ಮತ್ತು ರಾಗವಾಗಿ ಹಾಡಲು ಸ್ವ ಅಧ್ಯಯನ ಮಾಡಿ ವಿದ್ಯಾರ್ಥಿಗಳು ಕಲಿತಿರುವುದು ನಮ್ಮ ಶಾಲೆಯ ವಿಶೇಷತೆಯಾಗಿದೆ.

ಇಂಗ್ಲೀಷ್ ಸಂಭಾಷಣೆ ರೈಮ್ಸ್ ಡಿ.ವಿ.ಡಿ ಖರೀದಿಸಿ ಶಾಲಾ ಕಂಪ್ಯೂಟರ್‌ನಲ್ಲಿ ಹಾಕಿ ವಿದ್ಯಾರ್ಥಿಗಳು ಇಂಗ್ಲೀಷ್ ವಾತಾವರಣ ಪಡೆಯುವಲ್ಲಿ ಸಹಕರಿಸಲಾಗುತ್ತಿದೆ. ಶಾಲೆಯಲ್ಲಿ ಪ್ರೊಜೆಕ್ಟರ್ ಕೂಡ ಇರುವುದು ಗಮನಾರ್ಹ. ಇಂಗ್ಲೀಷ್ ಓದಲು ಕಲಿಸಲು ಅದರ ಜ್ಞಾನವಿಲ್ಲದ ಪೋಷಕರು 85% ಇದ್ದು, ಶಾಲೆಯಲ್ಲಿ ಕಲಿಸಿದರೆ ಮಾತ್ರ ಅದು ಮಗುವಿಗೆ ದೊರೆಯುವ ಸಾಧ್ಯತೆ ನಮಲ್ಲಿದೆ. ಮನೆಗೆ ಹೋದರೆ ಇಟ್ಟ ಬ್ಯಾಗ್ ಶಾಲೆಗೆ ಬರುವಾಗ ಬ್ಯಾಗ್ ಮುಟ್ಟುವ ಮಕ್ಕಳು 80% ಇರುವ ಹಳ್ಳಿಗಾಡಿನ ಶಾಲೆ ನಮ್ಮದು. ದಿನಾಲು ಎಲ್ಲಾ ಮಕ್ಕಳಿಗೂ ಇಂಗ್ಲೀಷ್ ಕಾಫಿ ರೈಟಿಂಗ್ ಹಾಕಿ ಕೊಡುತ್ತ ಅದನ್ನು ವಿದ್ಯಾರ್ಥಿಗಳು ಪುನರುಚ್ಚರಿಸುತ್ತ ಇನ್ನೊಂದು ವಾಕ್ಯವನ್ನು ಸಿಂಗಲ್ ಲೈನ್ ನೋಟ್ ಬುಕ್‌ನಲ್ಲಿ ಹಾಕಿ ಕೊಡುತ್ತಾ ಮಕ್ಕಳು ಪುನರುಚ್ಚರಿಸಿ ಅದನ್ನು ವಾಲ್‌ಸ್ಲೇಟಿನಲ್ಲಿ ಬರೆಯುವಂತೆ ಪ್ರೋತ್ಸಾಹಿಸಿದಾಗ ಅವರಲ್ಲಿ ಕಲಿಕೆಯಾಗಿರುವುದು ಸಂಶೋಧನೆಯ ಫಲ ಎಂದರೂ ತಪ್ಪಲ್ಲ.

ಮಳೆಗಾಲದ ಅವಧಿಯ 2017–18ನೇ ಸಾಲಿನ ಸಮವಸ್ತ್ರದ ಧರಿಸಿದ ಗುಲಾಬಿ ಮೊಗ್ಗಿನಂತಿರುವ ಮಕ್ಕಳ ಭಾವಚಿತ್ರ ತಮ್ಮ ಮುಂದಿಡುತ್ತಿದ್ದೇನೆ. ನಮ್ಮ ಶಾಲೆಯ ಮುಂಭಾಗದ ಗಾರ್ಡನ್ ಬೇಸಿಗೆಯಲ್ಲಿ ನೀರಿನ ಕೊರತೆಯಿದ್ದರೂ ಅಲ್ಪಸ್ವಲ್ಪ ಹಸಿರು ನಮ್ಮ ಗಾರ್ಡನ್ ನಲ್ಲಿರುತ್ತದೆ.

### ಮಕ್ಕಳ ಶೈಕ್ಷಣಿಕ ಬೆಳವಣಿಗೆ:–

ಪಠ್ಯ ಪುಸ್ತಕಕ್ಕೆ ಹೊರತಾದ ಮಕ್ಕಳ ಸಾಮಾನ್ಯ ಜ್ಞಾನದ ಬೆಳವಣಿಗೆಗೆ ಸಹಾಯಕವಾದ ಕೆಲವೊಂದು ಶೈಕ್ಷಣಿಕ ಪ್ರಯೋಗಗಳನ್ನು ವಿದ್ಯಾರ್ಥಿಗಳ ಮೇಲೆ ಮಾಡಿ ಯಶಸ್ವಿಯಾಗಿದ್ದೇವೆ.

- ಕರ್ನಾಟಕದ 30 ಜಿಲ್ಲೆಗಳ ಹೆಸರನ್ನು ಒಳಗೊಂಡ ಹಾಡನ್ನು ಶಾಲಾ ಪ್ರಾರ್ಥನಾ ಸಮಯದ ಪೂರ್ವದಲ್ಲಿ ವಿದ್ಯಾರ್ಥಿಗಳೆಲ್ಲರಿಗೂ ಸಮೂಹಗಾನವಾಗಿ ಹೇಳಿಸಿ ಕಲಿಸಲಾಗಿದೆ.
- ದೇಶದಲ್ಲಿರುವ ಎಲ್ಲಾ ರಾಜ್ಯಗಳ ಹೆಸರನ್ನೊಳಗೊಂಡ ಹಾಡು ಕಲಿಸಲಾಗಿದೆ.
- ಅಬ್ರಾಹಂ ಲಿಂಕನ್ ಬರೆದ ಪತ್ರದ ಸಾರಾಂಶದ ಪದ್ಯ ಕಲಿಸು ಗುರುವೇ ಕಲಿಸು, ಹಾಡು ಜೀವನದಲ್ಲಿ ವ್ಯಕ್ತಿ ಅಳವಡಿಸಿಕೊಳ್ಳಬೇಕಾದ ಮೌಲ್ಯಗಳನ್ನು ಒಳಗೊಂಡಿದ್ದು ಅದನ್ನು ವಿದ್ಯಾರ್ಥಿಗಳಿಗೆ ಪ್ರತಿ ಗುರುವಾರ ಹೇಳಿಸಲಾಗುತ್ತಿದೆ.
- ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಾರಂಭದಲ್ಲಿ ಪ್ರಾರ್ಥನೆ ಒಂದು ಅವಿಭಾಜ್ಯ ಅಂಗ. ಎಲ್ಲಾ ವಿದ್ಯಾರ್ಥಿಗಳು ಬಹಳಷ್ಟು ಹಾಡನ್ನು ಕಲಿತಿದ್ದಾರೆ.
- ಗ್ರಾಸ್ ಹೂಪರ್ ಪಾಠವನ್ನು ಸ್ಕಿಟ್ ಮಾಡಿ, ಆರನೇ ವರ್ಗದ ವಿದ್ಯಾರ್ಥಿಗಳು ನಿರರ್ಗಳವಾಗಿ ಇಂಗ್ಲೀಷ್ ಡೈಲಾಗ್ ನಡೆಸಿರುವುದು ಈ ವರ್ಷದ ಒಂದು ಸಾಧನೆಯಾಗಿದೆ.
- ವಿವೇಕಾನಂದರ ಪ್ರೇರಣಾ ವಾಕ್ಯಗಳನ್ನು ನಲಿಕಲಿ ಮಗು ಹೇಳುವುದನ್ನು ಕೇಳುವುದೇ ಒಂದು ಹಿಗ್ಗು.
- ಸಣ್ಣ ಸಣ್ಣ ಪುಟಾಣಿ ಮಕ್ಕಳು ರಾಷ್ಟ್ರೀಯ ಹಬ್ಬಗಳಲ್ಲಿ ತುಂಬಾ ಮುದ್ದಾಗಿ ಭಾಷಣ ಮಾಡುವ ಸಾಮರ್ಥ್ಯ ಪಡೆದಿರುವುದು ಈ ವರ್ಷದ ಒಂದು ಉತ್ತಮ ಬೆಳವಣಿಗೆ.

### ಶಿಶು ಸ್ನೇಹಿ ಪರಿಸರ:–

ವಿದ್ಯಾರ್ಥಿಗಳಿಗೆ ಶಾಲೆ ಆಕರ್ಷಣೀಯವಾದ ಸ್ಥಳವಾಗಬೇಕಾದರೆ ಅವರು ಇಷ್ಟ ಪಡುವ ಆಟಗಳಿಗೆ ಅವಕಾಶವೂ ಇರಬೇಕು. ಅದಕ್ಕಾಗಿ

- ಹಗ್ಗದ ಏಣಿ (ಸಾಹಸ ಕ್ರೀಡೆ) ಜೋಕಾಲಿ, ಏರುವ ಇಳಿಯುವ ಏಣಿಗಳು ನಮ್ಮ ಶಾಲೆಯಲ್ಲಿದೆ
- ಕ್ರೀಡಾ ಪಟುಗಳಿಗೆಂದೇ ಕೇಸರಿ ಶರ್ಟು ನಿಕ್ಕರ್‌ಗಳಿವೆ. ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಲು 2 ಸೆಟ್ (6+6)=2 ಸೀರೆಗಳಿವೆ. ಕಾಲ್ಗೆಜ್ಜೆಗಳನ್ನು, ಚಟುವಟಿಕೆಗಳಿಗಾಗಿ ದಾನಿಗಳಿಂದ ಪಡೆಯಲಾಗಿದೆ.
- ಔಷಧಿ ಸಸ್ಯಗಳು ಹಾಗೂ ಅವುಗಳಿಗೆ ಹೆಸರುಗಳ ಪ್ಲೇಟ್‌ತೂಗು ಹಾಕಲಾಗಿದೆ.
- ಆಹಾರ ಪಿರಾಮಿಡ್ ಮಾಡಿಸಿ ಮಕ್ಕಳಿಗೆ ಟಿ.ಎಲ್.ಎಂ ಆಗಿ ಬಳಸಲಾಗುತ್ತಿದೆ.

### ಪರಿಸರ ಮಿತ್ರರಾಗುತ್ತಿರುವ ವಿದ್ಯಾರ್ಥಿಗಳು:–

ಮಕ್ಕಳಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ನಿಂದ ಫ್ಲವರ್ ಮಾಡುವುದನ್ನು ಕಲಿಸಿ ಮಕ್ಕಳಿಂದ ಕ್ರಾಫ್ಟ್ ಮಾಡಿಸಲಾಗಿದೆ. ಶಾಲೆಯಲ್ಲಿ ನುಗ್ಗೆಗಿಡ ಹಾಕಲಾಗಿದ್ದು, ಅಡುಗೆಗೆ ಅದನ್ನು ಉಪಯೋಗಿಸಲಾಗುತ್ತಿದೆ. ಈ ಮೊದಲು ಪರಿಸರ ಮಿತ್ರ ಪ್ರಶಸ್ತಿಗೆ ಅರ್ಜಿ ಕೂಡ ಹಾಕಿರಲಿಲ್ಲ. 2012–13, 2014–15ರಲ್ಲಿ ಅರ್ಜಿ ಹಾಕಿ ಪರಿಸರ ಮಿತ್ರದ ಹಳದಿ ಮತ್ತು ಕಿತ್ತಳೆ ಪ್ರಶಸ್ತಿ ಪಡೆಯಲಾಗಿದೆ. ವರ್ಷದಿಂದ ವರ್ಷಕ್ಕೆ ಪ್ರಗತಿ ಹೊಂದಿದ ನಮ್ಮ ಶಾಲೆ 2016–17 ಮತ್ತು 2017–18 ರಲ್ಲಿ ಪರಿಸರ ಮಿತ್ರ ಹಸಿರು ಪ್ರಶಸ್ತಿ ಪಡೆದಿದೆ ಎಂದು ತಿಳಿಸಲು ಮನ ಹರ್ಷಿಸುತ್ತದೆ.

### ಸಾರ್ಥಕ ಕ್ಷಣಗಳು:–

2017–18ನೇ ಸಾಲಿನಲ್ಲಿ 6 ಮತ್ತು 7 ತರಗತಿ ಮಕ್ಕಳೊಂದಿಗೆ ಶಿವಮೊಗ್ಗ ಅಂಬೇಡ್ಕರ್ ಭವನದಲ್ಲಿ ಪರಿಸರ ಮಿತ್ರ ಹಸಿರು ಪ್ರಶಸ್ತಿ 3–1–2018 ರಂದು ಪಡೆಯಲಾಯಿತು. 75% ವಿದ್ಯಾರ್ಥಿಗಳು ರೈಲಿನಲ್ಲಿ ಪ್ರಯಾಣಿಸಿರಲಿಲ್ಲ. ಶಿವಮೊಗ್ಗ ನೋಡಿರಲಿಲ್ಲ. ರೈಲಿನಲ್ಲಿ ಪ್ರಯಾಣಿಸುವ ಶಿವಮೊಗ್ಗದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಪ್ರಶಸ್ತಿ ಸ್ವೀಕರಿಸಿ ಮಕ್ಕಳೂ ಗಾಳಿ ಶಕ್ತಿ, ಮಣ್ಣು, ನೀರು, ಆರೋಗ್ಯ ನೈರ್ಮಲ್ಯಗಳ ಬಗ್ಗೆ ವಿಶೇಷ ಜ್ಞಾನ ಹೊಂದಿರುವರೆಂದು ತಿಳಿಸಲು ಹರ್ಷಿಸುತೇವೆ. ಈ ಎರಡು ವರ್ಷಗಳಲ್ಲಿ ಇಬ್ಬರು ಶಿಕ್ಷಕರು ಮತ್ತು 8 ಮಕ್ಕಳು 11 ವಿಭಿನ್ನ ವಿಶೇಷತೆಯುಳ್ಳ ಶಾಲೆಗಳಿಗೆ ಭೇಟಿ ನೀಡಿ ಹೆಚ್ಚಿನ ಸ್ಫೂರ್ತಿ ಪಡೆದಿರುತ್ತೇವೆ.

### ಶಾಲೆಗೆ ದಾನ ನೀಡಿದವರ ವಿವರ:–

| ಕ್ರಸಂ | ದಾನಿಗಳ ಹೆಸರು | ಹಣದ ರೂಪದಲ್ಲಿ ದಾನ | ವಸ್ತುರೂಪ ದಾನ | ಮಾನವ ರೂಪ ದಾನ | ಮೊತ್ತ |
|---|---|---|---|---|---|
| 1 | ಸಿದ್ದಿವಿನಾಯಕ ಎಂ.ಕೆ | | ತೆಂಗಿನಕಾಯಿ,ಪೈಪ್, ಟ್ಯಾಪ್, | 6 ಆಳು | 10000 |
| 2 | ಸುಬ್ಬರಾವ್, ಹೂಗೊಪ್ಪಲು | ಪ್ರಾಜೆಕ್ಟರ್ | | | 25000 |
| 3 | ಮಹಾಬಲೇಶ್ವರ, ಹೂಗೊಪ್ಪಲು | | ಕ್ರೀಡಾಪಟುಡ್ರೆಸ್ | | 5000 |
| 4 | ಹರೀಶ್ ಗೌಡ್ರು | | 6 ಸೀರೆ (ಡ್ಯಾನ್ಸಗಾಗಿ) | | 5000 |
| 5 | ನರೇಂದ್ರ | | ಹಾಲುಕಾಯಿಸುವ ಪಾತ್ರೆ | 2 ಆಳು | 2000 |





